ಕೊಡುತ್ತೇವೆಂದು ಹೇಳಿದ್ದೇವೆ. Indian Telegraphic Act ಪ್ರಕಾರ ಈ ಒಂದು ಕಾರ್ಯ ಮಾಡುತ್ತಿದ್ದೇವೆ. ಇಡೀ ದೇಶದಲ್ಲಿದೆ ಮುಂದೆ ಇದರ ಬಗ್ಗೆ ಯಾವ ರೀತಿ ಪರಿಹಾರ ಕೊಡಬಹುದು ಎಂದು ನಾವು ಪರಿಶೀಲಿಸೋಣ. ಮಾನ್ಯ ರೇವಣ್ಣನವರು ಒಂದು ಮಾತು ಹೇಳಿದರು. ಉತ್ತರದಲ್ಲಿ ಸ್ವಲ್ಪ ವ್ಯತ್ಯಾಸ ಇತ್ತು. ಈಗೇನು ಈ ಯೋಜನೆಯನ್ನು ಕಾಮಗಾರಿ ಮಾಡುತ್ತಿದ್ದೇವೆ ಅಲ್ಲಿ forest land ಬರುತ್ತಿಲ್ಲ. ಮುಂದೆ forest land ಬರುತ್ತೆ ಅಲ್ಲಿ ಅನುಮತಿ ತೆಗೆದುಕೊಂಡು ಸೆಪ್ಟೆಂಬರ್‌ನಲ್ಲಿ ಈ ಕಾಮಗಾರಿ ಮುಗಿಸುತ್ತೇವೆ.

ಅಧ್ಯಕ್ಷರು : ಪುಟ್ಟರಾಜು ಅವರ ಪರವಾಗಿ ಎಂ.ಟಿ.ಕೃಷ್ಣಪ್ಪನವರು ತಾವು ಪ್ರಶ್ನೆ ಕೇಳಿ.

(ಗೊಂದಲ)

ಶ್ರೀ ಬಿ.ರಮಾನಾಥ್ ರೈ : ಅಲ್ಲಿರುವಂಥ ಅಧಿಕಾರಿಶಾಹಿ ಏನು ಇದ್ದಾರೆ ಅವರು ಸ್ವಲ್ಪ ಜಾಗ್ರತೆ ವಹಿಸಬೇಕಾಗುತ್ತದೆ...

ಅಧ್ಯಕ್ಷರು : Please ಕುಳಿತುಕೊಳ್ಳಿ. ನಾನು ಈಗಾಗಲೇ ಬೇರೆ ಪ್ರಶ್ನೆ ಕೇಳಿದ್ದೇನೆ. ಪ್ರತಿಯೊಂದಕ್ಕೂ ಎದ್ದು ನಿಂತರೆ ಹೇಗೆ?

ಬೆಂಗಳೂರಿನಲ್ಲಿ ಕಡಿಮೆ ಆದಾಯವುಳ್ಳವರಿಗೆ ಬಿ.ಡಿ.ಎ.ನಿಂದ ವಿತರಿಸುವ ನಿವೇಶನಗಳು

16 (451) ಶ್ರೀ ಪುಟ್ಟರಾಜು ಸಿ.ಎಸ್. (ಮೇಲುಕೋಟೆ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ದಿನಾಂಕ: 01-5-2008 ರಿಂದ 22-2-2010 ರವರೆಗೆ ಹಂಚಿಕೆ ಮಾಡಲಾದ ನಿವೇಶನಗಳ ಸಂಖ್ಯೆ ಎಷ್ಟು; (ಬಡಾವಣೆ ಹಾಗೂ ನಿವೇಶನಗಳ ಅಳತೆವಾರು ಮಾಹಿತಿ ನೀಡುವುದು);

ಆ) ಈ ನಿವೇಶನಗಳಲ್ಲಿ ಕಡಿಮೆ ಆದಾಯವುಳ್ಳವರಿಗೆ ಹಂಚಿಕೆ ಮಾಡಿರುವ ನಿವೇಶನಗಳ ಸಂಖ್ಯೆ ಎಷ್ಟು (ಬಡಾವಣೆಗಳವಾರು ಮಾಹಿತಿ ನೀಡುವುದು)?

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ದಿನಾಂಕ: 01–5–2008 ರಿಂದ 22–2–2010 ರವರೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಸಾರ್ವಜನಿಕರಿಗೆ ಯಾವುದೇ ನಿವೇಶನಗಳನ್ನು ಹಂಚಿಕೆ ಮಾಡಿರುವುದಿಲ್ಲ ಮತ್ತು ಈ ಅವಧಿಯಲ್ಲಿ ನಿವೇಶನ ಹಂಚಿಕೆಗಾಗಿ ಯಾವುದೇ ಪ್ರಕಟಣೆ ಹೊರಡಿಸಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಎಂ.ಟಿ.ಕೃಷ್ಣಪ್ಪ (ಮಾನ್ಯ ಸಿ.ಎಸ್.ಪುಟ್ಟರಾಜುರವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಉತ್ತರಿಸಿದ್ದಾರೆ ಆದರೆ ನಮ್ಮ ಪ್ರಶ್ನೆಗೂ ಉತ್ತರಕ್ಕೂ ಅಸಂಬದ್ಧವಾದ ವಿಚಾರ. BDA ನಿಂದ 1–5–08 ರಿಂದ 22–2–10 ರವರೆಗೆ ಯಾವುದೇ ಸೈಟ್‌ನ್ನು ಬಿಡುಗಡೆ ಮಾಡಿಲ್ಲವೆಂದು ಹೇಳಿದ್ದಾರೆ. G-category ಯಾವುದು, ಯಾವ layout, ಏನೇನು ಆಗಿದೆ ಎನ್ನುವ ಬಗ್ಗೆ ಸರಿಯಾದ ಮಾಹಿತಿಯಿಲ್ಲ. ಯಾವ್ಯಾವು layout ನ್ನು ಮಾಡಿದ್ದಾರೆ? ಎಲ್ಲೆಲ್ಲಿ ಕೊಟ್ಟಿದ್ದಾರೆ ಎನ್ನುವ ಮಾಹಿತಿ ನನಗೆ ಸಿಕ್ಕಿಲ್ಲ. ದಯಮಾಡಿ ಮಾನ್ಯ ಸಚಿವರಲ್ಲಿ ವಿನಂತಿ ಏನೆಂದರೆ, ಯಾವ್ಯಾವ layout ನಲ್ಲಿ ಎಷ್ಟೆಷ್ಟು ಸೈಟ್ಸ್ ಬಿಡುಗಡೆಯಾಗಿದೆ? ಯಾರಿಗೆ ಕೊಟ್ಟಿದ್ದೀರಾ? G-category ಕೊಟ್ಟಿದ್ದೀರಾ? ಯಾರ್ಯಾರಿಗೆ ಏನೇನು ಕೊಟ್ಟಿದ್ದೀರಾ ಎನ್ನುವುದನ್ನು ಮಾನ್ಯ ಸಚಿವರು ಮಾಹಿತಿ ಕೊಟ್ಟರೆ ಅನುಕೂಲವಾಗುತ್ತದೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಸದಸ್ಯರು ಪ್ರಶ್ನೆ ಏನು ಕೇಳಿದ್ದಾರೆಂದರೆ, ಆ category ಈ category ಎಂದಲ್ಲ.

ಅಧ್ಯಕ್ಷರು : ಪ್ರಶ್ನೆ ಬಹಳ specific ಆಗಿ ಇದೆ.

ಶ್ರೀ ಹೆಚ್.ಡಿ.ರೇವಣ್ಣ : ನೋಡಿ ಅವರು ಬಹಳ clear cut ಆಗಿ ಕೇಳಿದ್ದಾರೆ. BDA ನಿಂದ ನಿವೇಶನಗಳನ್ನು ಯಾವ್ಯಾವ ಏರಿಯಾದಲ್ಲಿ ಮಾಡಿದಿರಿ? ಅದು ಯಾರಿಗೆ ಕೊಟ್ಟಿದ್ದಾರೆ? ಒಬ್ಬರಿಗೆ ಕೊಟ್ಟಿಲ್ಲವೆಂದರೆ, G-category ಯಲ್ಲಿ ಒಬ್ಬರಿಗೂ ಕೊಟ್ಟಿಲ್ಲವೆ? ಈ ತರಹ ಉತ್ತರ ಕೊಡುವುದಾದರೆ, ಅವರೇನು category ಕೇಳಿದ್ದಾರಾ? (1) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ದಿನಾಂಕ: 1–5–08 ರಿಂದ 22–2–10 ರವರೆಗೆ ಹಂಚಿಕೆ ಮಾಡಲಾದ ನಿವೇಶನಗಳ ಸಂಖ್ಯೆ ಎಷ್ಟು? ಇದರ ಜೊತೆಗೆ

ಬಡಾವಣೆ ಹಾಗೂ ನಿವೇಶನಗಳ ಅಳತೆವಾರು ಮಾಹಿತಿ ನೀಡುವುದು ಎಂದು ಬಹಳ clear cut ಆಗಿ ಕೇಳಿದ್ದಾರೆ. (2) ಈ ನಿವೇಶನಗಳಲ್ಲಿ ಕಡಿಮೆ ಆದಾಯವುಳ್ಳವರಿಗೆ ಹಂಚಿಕೆ ಮಾಡಲಾಗಿರುವ ನಿವೇಶನಗಳ ಸಂಖ್ಯೆ ಎಷ್ಟು? ಬಡಾವಣೆಗಳವಾರು ಮಾಹಿತಿ ನೀಡುವುದು ಎಂದು ಕೇಳಿದ್ದಾರೆ. Middle income ಇರಬಹುದು, clear cut ಆಗಿ ಕೇಳಿದ್ದಾರೆ. ನಿವೇಶನಗಳನ್ನು ಕೊಟ್ಟಿದ್ದೀರೋ ಇಲ್ಲವೋ? ಹಾಗಾದರೆ ಒಂದು ಸೈಟ್ ಕೊಟ್ಟಿಲ್ಲವೆ? G-category ಇರಬಹುದು, ನಾವೇನು ಇಂಥ category ಎಂದೇನು ಹೇಳಿಲ್ಲ. ಕೊಟ್ಟಿಲ್ಲದಿದ್ದರೆ ನಾವು ಯಾವುದು ಕೊಟ್ಟಿಲ್ಲವೆಂದು ಹೇಳಬೇಡಿ. ಕೊಟ್ಟಿದ್ದರೆ ಇಂತಿಂಥ G-category ಯಲ್ಲಿ ಕೊಟ್ಟಿದ್ದೇವೆಂದು ಹೇಳಿ, ಅದಕ್ಕಾಕೆ ಮುಚ್ಚುಮರೆ ಇಡುತ್ತೀರಿ? ಅರ್ಧಂಬರ್ಧ ಹೇಳುವುದಕ್ಕೆ ಹೋಗಬೇಡಿ.

ಶ್ರೀ ಸುರೇಶ್‌ಕುಮಾರ್ (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ರೇವಣ್ಣನವರು ಈ ಪ್ರಶ್ನೆಯ ಮೇಲೆ ಹೆಚ್ಚು ಬೆಳಕು ಚೆಲ್ಲುವ ಪ್ರಯತ್ನ ಮಾಡಿದ್ದಾರೆ. ಪ್ರಶ್ನೆ ಇರುವುದು ಬಹಳ ಸಿಂಪಲ್. (1) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ದಿನಾಂಕ: 1–5–08 ರಿಂದ 22–2–10 ರವರೆಗೆ ಹಂಚಿಕೆ ಮಾಡಲಾದ ನಿವೇಶನಗಳು ಸಂಖ್ಯೆ ಎಷ್ಟು? ಇದರ ಜೊತೆಗೆ ಬಡಾವಣೆ ಹಾಗೂ ನಿವೇಶನಗಳ ಅಳತೆವಾರು ಮಾಹಿತಿ ನೀಡುವುದು ಎಂದು ಅದು ಕೂಡ ಬಹಳ specific ಕೇಳಿದ್ದಾರೆ. ಅಂದರೆ general allotment ಎಷ್ಟೆಂದು ಕೇಳಿದ್ದಾರೆ. ಅದಕ್ಕೆ ದಿನಾಂಕ: 1–5–08 ರಿಂದ 22–2–10 ರವರೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಸಾರ್ವಜನಿಕರಿಗೆ ಯಾವುದೇ ನಿವೇಶನಗಳನ್ನು ಹಂಚಿಕೆ ಮಾಡಿರುವುದಿಲ್ಲ. ಯಾವುದೇ ಬಡಾವಣೆಯಲ್ಲಿ general allotment ಎಲ್ಲೂ ಕೂಡ ಮಾಡಿಲ್ಲ. ಈ ಅವಧಿಯಲ್ಲಿ ನಿವೇಶನ ಹಂಚಿಕೆಗಾಗಿ ಯಾವುದೇ ಪ್ರಕಟಣೆ ಹೊರಡಿಸಿರುವುದಿಲ್ಲ. ಈ ಒಂದು ಪ್ರಶ್ನೆಗೆ ಉತ್ತರಿಸಿದ್ದೇವೆ. ನಿವೇಶನಗಳನ್ನು ಹಂಚಿಕೆ ಮಾಡದೇ ಇರುವಾಗ ಈ ನಿವೇಶನಗಳನ್ನು ಕಡಿಮೆ ಆದಾಯವುಳ್ಳವರಿಗೆ ಹಂಚಿಕೆ ಮಾಡಲಾಗಿರುವ ನಿವೇಶನಗಳ ಸಂಖ್ಯೆ ಉದ್ಭವಿಸುವುದಿಲ್ಲ. ಈಗ ನೀವು ಒಂದು ಪ್ರಶ್ನೆ ಕೇಳುತ್ತಿದ್ದೀರಿ. G-categoryಗೆ ಕೊಟ್ಟಿಲ್ಲವೆ? ಎಷ್ಟು ಕೊಟ್ಟಿದ್ದೀರಿ?

ಶ್ರೀ ಎಂ.ಟಿ.ಕೃಷ್ಣಪ್ಪ : ನಾವು ಕೇಳುತ್ತಿರುವುದು ಯಾವುದೂ ಕೊಟ್ಟಿಲ್ಲವೆಂದಲ್ಲ. General, reservation ಕೇಳುತ್ತಿಲ್ಲ. ಯಾರ್ಯಾರಿಗೆ ಯಾವ್ಯಾವ category ಯಲ್ಲಿ ಕೊಟ್ಟಿದ್ದೀರಾ?

ಶ್ರೀ ಸುರೇಶ್ ಕುಮಾರ್ : ಕೃಷ್ಣಪ್ಪನವರೆ, ನೀವು ಈಗ ಕೇಳಿದ supplementary ಯನ್ನು ಒಪ್ಪಿಕೊಳ್ಳುತ್ತೇನೆ. ಈ question ಮೇಲ್ನೋಟಕ್ಕೆ ನೀವು ಬಡಾವಣೆ ಹಾಗೂ ನಿವೇಶನಗಳ ಅಳತೆವಾರು ಮಾಹಿತಿ ನೀಡುವುದು ಎಂದರೆ, it amounts to general allotment ಅಲ್ಲವೇ? ಈಗ ತಾವೇನು ಕೇಳುತ್ತಿದ್ದೀರಿ, G-category ನಲ್ಲಿ ಯಾರ್ಯಾರಿಗೆ ಕೊಡುತ್ತಾರೆ, ಯಾವ ರೀತಿ ಕೊಡುತ್ತಾರೆ, ಎನ್ನುವ ಬಗ್ಗೆ ಒಂದು ನೀತಿ ನಿಮಗೆ ಬಹಳ ಚೆನ್ನಾಗಿ ಗೊತ್ತು. ಆ ನೀತಿಯ ಅನ್ವಯ ಆ ನಿಯಮಗಳನ್ವಯ G-category ನಲ್ಲಿ ಈ ಅವಧಿಯಲ್ಲಿ 143 ನಿವೇಶನಗಳನ್ನು ಕೊಡಲಾಗಿದೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಕಾನೂನು ಸಚಿವರು ಒಂದು ಮಾತು ಹೇಳಿದರು. ನನಗೆ ಚೆನ್ನಾಗಿ ಗೊತ್ತಿದೆ ಎಂದು ಹೇಳಿದರು.

ಅಧ್ಯಕ್ಷರು : ಪ್ರಶ್ನೆ ಅಷ್ಟು specific ಆಗಿ ಇದೆ.

ಶ್ರೀ ಹೆಚ್.ಡಿ.ರೇವಣ್ಣ : ಒಂದು ನಿಮಿಷ ರೆಕಾರ್ಡ್‌ಗೆ ಹೋಗುತ್ತದೆ. ಇದುವರೆವಿಗೂ G-category ಯಲ್ಲಾಗಲಿ ಬೇರೆ category ಯಲ್ಲಾಗಲಿ ನನ್ನ ಜೀವನದಲ್ಲಿ ನಾನು ಕೇಳಿಲ್ಲ. ಅದನ್ನು ತಾವು ಸ್ವಲ್ಪ ಅರ್ಥ ಮಾಡಿಕೊಳ್ಳಿ.

ಅಧ್ಯಕ್ಷರು : ನಿಮಗೆ ಹೇಳಿಲಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಯಾರ್ಯಾರು ಕೇಳಿದ್ದಾರೆ, ಯಾರ್ಯಾರಿಗೆ ಕೊಟ್ಟಿದ್ದಾರೆಂದು ಸಾರ್ವಜನಿಕರಿಗೆ ಹೇಳುವುದಕ್ಕೆ ಏಕೆ ಮುಚ್ಚಿಡುತ್ತೀರಿ? ಅದು ಬಿಟ್ಟು ನಿಮಗೆ ಚೆನ್ನಾಗಿ ಗೊತ್ತು ಎಂದರೆ ಅರ್ಥ ಏನು? ನನ್ನ ಜೀವನದಲ್ಲಿ ಇಲ್ಲಿಯವರೆಗೆ G-category ಯಲ್ಲಿ ಅರ್ಜಿ ಹಾಕಿಕೊಂಡು ಹೋಗಿಲ್ಲ.

ಶ್ರೀ ಸುರೇಶ್ ಕುಮಾರ್ : ಮಾನ್ಯ ರೇವಣ್ಣನವರೆ ನಾನು ನಿಮ್ಮ ಬಗ್ಗೆ ಹೇಳಲಿಲ್ಲ. ತಾವು ಅರ್ಥ ಮಾಡಿಕೊಳ್ಳಿ. ಅಪಾರ್ಥ ಮಾಡಿಕೊಳ್ಳಬೇಡಿ.

ಶ್ರೀ ಹೆಚ್.ಡಿ.ರೇವಣ್ಣ : ಚೆನ್ನಾಗಿ ಗೊತ್ತು ಎಂದರೆ ಏನು ಅರ್ಥ ಸ್ವಾಮಿ? ನಾವು ಏನಾದರೂ ಸೈಟ್ ತೆಗೆದುಕೊಂಡಿದ್ದೇವೆಯೆ?

ಶ್ರೀ ಸುರೇಶ್ ಕುಮಾರ್ : ಸರ್ಕಾರದಲ್ಲಿ ಇದ್ದವರು. ನಾನು ಆ ರೀತಿಯಲ್ಲಿ ಹೇಳಿಲ್ಲ. ಆ ರೀತಿಯಾಗಿ ಹೇಳಿದ್ದರೆ ನಾನು ವಾಪಸ್ ತೆಗೆದುಕೊಂಡಿದ್ದೇನೆ.

ಅಧ್ಯಕ್ಷರು : ಈಗ ಆಯಿತು ಬಿಡಿ.

ಶ್ರೀ ಹೆಚ್.ಡಿ.ರೇವಣ್ಣ : ಈಗ 143 ಸೈಟ್ಸ್ ಹಂಚಿಕೆಯಾಗಿದೆ ಅಲ್ಲವೆ ಅದರ ಬಗ್ಗೆ ವಿವರ ಯಾವಾಗ ಒದಗಿಸುತ್ತೀರಿ?

ಶ್ರೀ ಸುರೇಶ್‌ಕುಮಾರ್ : ಮಾಹಿತಿಯನ್ನು ಸದಸ್ಯರಿಗೆ ಒದಗಿಸುತ್ತೇವೆ.

ರಾಜ್ಯದಲ್ಲಿ ವಿದ್ಯುತ್ ಉತ್ಪಾದನಾ ಸಾಮರ್ಥ್ಯದ ಬಗ್ಗೆ

17 (511) ಶ್ರೀ ಅಮರೇಶ್ (ಮುಳಬಾಗಿಲು) : ಮಾನ್ಯ ಮುಂಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಲ್ಲಾ ಮೂಲಗಳಿಂದ ಉತ್ಪತ್ತಿಯಾಗುತ್ತಿರುವ ವಿದ್ಯುತಿನ ಸಾಮರ್ಥ್ಯವೆಷ್ಟು;

ಆ) ರಾಜ್ಯದಲ್ಲಿ ಅವಶ್ಯಕತೆ ಇರುವ ವಿದ್ಯುತ್ತಿನ ಸಾಮರ್ಥ್ಯವೆಷ್ಟು;

ಇ) ಉತ್ಪಾದನೆಯು ವಿದ್ಯುತ್ತಿಗೂ ಅವಶ್ಯಕತೆಯ ವಿದ್ಯುತ್ತಿಗೂ ವ್ಯತ್ಯಾಸವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಇದನ್ನು ಸರಿದೂಗಿಸಲು ಕೈಗೊಂಡಿರುವ ಕ್ರಮವೇನು?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ರಾಜ್ಯದಲ್ಲಿ ಪ್ರಸ್ತುತ ದಿನವಹಿ ಎಲ್ಲಾ ಮೂಲಗಳಿಂದ 93 ಮಿಲಿಯನ್ ಯೂನಿಟ್‌ಗಳಷ್ಟು ವಿದ್ಯುತ್ ಉತ್ಪಾದನೆಯಾಗುತ್ತಿದೆ. ಇದಲ್ಲದೆ ಕೇಂದ್ರ ವಿದ್ಯುತ್ ಉತ್ಪಾದನಾ ಘಟಕಗಳಿಂದ 32 ಮಿಲಿಯನ್ ಯೂನಿಟ್‌ಗಳು ದೊರೆಯುತ್ತಿದ್ದು, ಒಟ್ಟು 125 ಮಿಲಿಯನ್ ಯೂನಿಟ್‌ಗಳು ಲಭ್ಯವಾಗುತ್ತಿದೆ.

ಆ) ಪ್ರಸಕ್ತ ರಾಜ್ಯದ ದಿನವಹಿ ವಿದ್ಯುತ್ ಬೇಡಿಕೆ ಸುಮಾರು 150 ಮಿಲಿಯನ್ ಯೂನಿಟ್‌ಗಳಾಗಿರುತ್ತದೆ.

ಇ) ಹೌದು.

ಈ) ಪ್ರಸಕ್ತ ವರ್ಷವಾದ 2009-10ರಲ್ಲಿ ರಾಜ್ಯದ ಅನಿರ್ಬಂಧಿತ ವಿದ್ಯುತ್ ಬೇಡಿಕೆ ಸುಮಾರು 51,019 ಮಿಲಿಯನ್ ಯೂನಿಟ್‌ಗಳೆಂದು ಅಂದಾಜು ಮಾಡಲಾಗಿದ್ದು, ವಿದ್ಯುತ್ ಲಭ್ಯತೆಯ ಪ್ರಮಾಣ ಸುಮಾರು 44,550 ಮಿಲಿಯನ್ ಯೂನಿಟ್ಟುಗಳೆಂದು ಅಂದಾಜಿಸಲಾಗಿದೆ. ಹೀಗಾಗಿ ಪ್ರಸಕ್ತ